**ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಕಾರವಾರ**

ಅ.ದಾ.ನಂ. 1-2015 ಪಿ.ಡಬ್ಲ್ಯೂಃ 1

ಸಾಕ್ಷಿಯ ಹೆಸರು ಲಲಿತಾ ಮಾರುತಿ ನಾಯ್ಕ

ಕಾರವಾರ

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 19-**11-2019**

**ಮುಂದುವರಿದ ಪಾಟಿ ಸವಾಲುಃ ಶ್ರೀ ಆರ್ ವಿ ಬಿ ವಕೀಲರಿಂದಃ 2 ನೇ ಪ್ರತಿವಾದಿ ಪರ .**

ನಾನು ಬಿ .ಎ ಪದವೀದರಳಾಗಿದ್ದೇನೆ . ನಾನು 1970 ರಲ್ಲಿ ಮದುವೆಯಾಗಿದ್ದೇನೆ . ನಾನು ನನ್ನ ಪ್ರಕಾರ ದಾವಾ ಆಸ್ತಿಯಲ್ಲಿ ಮನೆ ಕಟ್ಟಿದ್ದು , ಅದನ್ನು ಕಟ್ಟಲು ನಗರಸಭೆ ಅಥವಾ ಕೆ.ಡಿ.ಎ ಯಿಂದ ಪರವಾನಿಗೆ ಪಡೆದಿದ್ದೇನಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ಮನೆ ಕಟ್ಟುವ ಪೂರ್ವದಲ್ಲಿ ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿ ದಾವಾ ಆಸ್ತಿಯ ಸರ್ವೆ ಮಾಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ನಾನು ಯಾವುದಾದರೂ ಒಂದು ಸ್ಥಳದಲ್ಲಿ ನಿಂತು ಕೊಂಡರೆ ಅದರ ಸರ್ವೆ ನಂಬರ್ ನನಗೆ ಹೇಳಲು ಬರುತ್ತದೆಯಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ನಾನು ಕಟ್ಟಿಸಿದ ಮನೆ ಯಾವ ಸರ್ವೆ ನಂಬರ್ ನಲ್ಲಿದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಮನೆ ಕಟ್ಟುವ ಪೂರ್ವದಲ್ಲಿ ಇಂಜಿನೀಯರ್ ಅವರಿಂದ ನಕಾಶೆ ತಯಾರಿಸಬೇಕಾಗುತ್ತದೆ ಎಂದರೆ ಸರಿ. ಅದನ್ನು ತೆಗೆದುಕೊಂಡು ನಗರಸಭೆ ಮತ್ತು ಕೆ.ಡಿ.ಎ ದಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಕ್ರಯದಸ್ತು ಮಾಡಿಕೊಟ್ಟಿಲ್ಲದ ಕಾರಣ ಆ ರೀತಿ ಮಾಡಿಸಿಕೊಂಡಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ಯಾವುದೇ ಜಾಗೆಯಲ್ಲಿ ಕ್ರಯದಸ್ತು ಆಗುವ ಪೂರ್ವದಲ್ಲಿ ಮನೆ ಕಟ್ಟಿಕೊಳ್ಳುವ ಅಧಿಕಾರ ಇಲ್ಲ ಎಂಬ ಸಾಮಾನ್ಯ ಜ್ಞಾನ ನನಗೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಫಾರ್ಮ್‌ಹೌಸ್ ಎಂದು ಕಟ್ಟಿದ್ದೇವೆ ಎಂದು ಸಾಕ್ಷಿಯು ನುಡಿಯುತ್ತಾರೆ .ಫಾರ್ಮ್‌ಹೌಸ್ ಆಗಲೀ , ಮನೆ ಆಗಲೀ ಕಟ್ಟಿದ್ದರೆ ಅದಕ್ಕೆ ತೆರಿಗೆ ತುಂಬಬೇಕಾಗುತ್ತದೆ ಎಂದರೆ ಸರಿ . ನಾನು ಮನೆಯ ತೆರಿಗೆ ತುಂಬುತ್ತಿಲ್ಲ ಎಂದರೆ ಸರಿ .ದಾವಾ ಸ್ವತ್ತಿನಲ್ಲಿ ಯಾವುದೇ ಮನೆ ಕಟ್ಟಿದ್ದು ಇಲ್ಲ ಮತ್ತು ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ .

2. ಸಾಕ್ಷಿಗೆ ಈಗ ನಿಪಿ–7 , 8, 9 ನ್ನು ತೋರಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ . ನಿಪಿ–7 ರಿಂದ 9 ರಲ್ಲಿ 2 ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ . ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಬ್ರಾಯ ಬೇಳೂರಕರ್ ಎನ್ನುವವರಿಗೆ 2 ನೇ ಪ್ರತಿವಾದಿಯು ನೀಡಿದ ವಟಮುಕ್ತಾರ ನಾಮೆಯನ್ನು ನಾನು ನೋಡಿದ್ದೇನಾ ಎಂದರೆ ಹೌದು ಎಂದು ಸಾಕ್ಷಿಯು ನುಡಿಯುತ್ತಾರೆ . ವಟಮುಕ್ತಾರ ನಾಮೆಯ ದಿನಾಂಕ ಹೇಳಬಹುದೇ ಎಂದರೆ ನೆನಪಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ವಟಮುಕ್ತಾರ ನಾಮೆ ನೊಂದಾಯಿತವಾಗಿದೆಯೇ ಅಥವಾ ನೋಟರೈಸಡ್ ಆಗಿದೆಯೋ ಎಂದರೆ ಮೂಲವಾದಿ ನೋಡಿಕೊಳ್ಳುತ್ತಿದ್ದರಿಂದ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ವಟಮುಕ್ತಾರ ನಾಮೆಯನ್ನು ನಾನು ಈ ಪ್ರಕರಣದಲ್ಲಿ ಈವರೆಗೂ ಹಾಜರು ಪಡಿಸಿಲ್ಲ ಎಂದರೆ ಸರಿ . ವಟಮುಕ್ತಾರ ನಾಮೆ ಯಾರ ಬಳಿ ಇದೆ ಎಂದರೆ ಮೂಲವಾದಿಯು ವಕೀಲರ ಬಳಿ ನೀಡಿರಬಹುದು ಎಂದು ಸಾಕ್ಷಿಯು ನುಡಿಯುತ್ತಾರೆ . 2 ನೇ ಪ್ರತಿವಾದಿ ಸುಬ್ರಾಯ ರಾಮಾ ಬೇಳೂರಕರ್ ಅವರಿಗೆ ಭೂಮಿಯನ್ನು ಮಾರಾಟ ಮಾಡುವ ಸಂಬಂಧ ಯಾವುದೇ ವಟಮುಕ್ತಾರ ನಾಮೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ . ಆ ರೀತಿ ವಟಮುಕ್ತಾರ ನಾಮೆ ಇದೆ ಎಂದು ಮತ್ತು ಅದನ್ನು ನಾನು ನೋಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

3. ನನ್ನ ಪ್ರಕಾರ ದಾವಾ ಆಸ್ತಿಯಲ್ಲಿ ಮನೆಕಟ್ಟಲು ಕಬಜಾ ಅನ್ನು ಯಾರು ಯಾವಾಗ ನೀಡಿದರು ಎಂದರೆ ಸಾಕ್ಷಿಯು 1987 ರಲ್ಲಿ ಸುಬ್ರಾಯ ಬೇಳೂರಕರ್ ಅವರೇ ನೀಡಿದರು ಎಂದು ಸಾಕ್ಷಿಯು ನುಡಿಯುತ್ತಾರೆ . ಎಷ್ಟು ಗುಂಟೆಯ ಆಸ್ತಿಯ ಕಬಜೆ ನೀಡಿದರು ಎಂದರೆ 20 ಗುಂಟೆ ಎಂದು ಸಾಕ್ಷಿಯು ನುಡಿಯುತ್ತಾರೆ . ಕಬಜಾ ಅನ್ನು ಹಸ್ತಾತಂರಿಸುವ ಬಗ್ಗೆ ಯಾವುದಾದರೂ ದಾಖಲಾತಿಗಳು ಇವೆಯಾ ಎಂದರೆ ವಚನ ಪತ್ರ ಹೊರತುಪಡಿಸಿ ಬೇರೆ ದಾಖಲಾತಿ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ಯಾವ ವಚನ ಪತ್ರದ ಪ್ರಕಾರ ನನಗೆ ಕಬಜೆ ನೀಡಿದರು ಎಂದರೆ ನಿಪಿ–9 ರ ಪ್ರಕಾರ ನೀಡಿದರು ಎಂದು ಸಾಕ್ಷಿಯು ನುಡಿಯುತ್ತಾರೆ . ನಿಪಿ–9 ರ ಪ್ರಕಾರ 20 ಗುಂಟೆ ಆಸ್ತಿಯ ಕಬಜೆ ನೀಡಿದರು . ನನ್ನ ಪ್ರಕಾರ 20 ಗುಂಟೆ ಆಸ್ತಿಯ ಕಬಜೆ ಒಂದೇ ಬಾರಿಗೆ ನೀಡಿದ್ದರು . ಕಬಜೆ ಪಡೆಯುವ ಸಮಯದಲ್ಲಿ ಸರ್ವೆ ಇಲಾಖೆಯ ಮುಾಲಕ ಸರ್ವೆ ಮಾಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ವಚನ ಪತ್ರಗಳಲ್ಲಿ ನನ್ನ ಪ್ರಕಾರ ನನ್ನ ಕಬಜೆಗೆ ನೀಡಿದ ಆಸ್ತಿಯ ಗಡಿಗಳನ್ನು ನಮೂದಿಸಲಾಗಿದೆಯೇ ಎಂದರೆ ನಕ್ಷೆ ಲಗತ್ತಿಸಿದೆ ಎಂದು ಸಾಕ್ಷಿಯು ನುಡಿಯುತ್ತಾರೆ .

ಎಷ್ಟು ಪುಟಗಳ ನಕ್ಷೆ ಇದೆ ಎಂದರೆ 1 ಪುಟದ ನಕ್ಷೆ ಎಂದು ಸಾಕ್ಷಿಯು ನುಡಿಯುತ್ತಾರೆ . ನಿಪಿ–8 ಮತ್ತು 9 ಕ್ಕೆ ಯಾವುದೇ ನಕಾಶೆ ಲಗತ್ತಿಸಿಲ್ಲ ಎಂದರೆ ಸರಿ . ನಿಪಿ–8 ಮತ್ತು 9 ರಲ್ಲಿ ಆಸ್ತಿಯ ಗಡಿ ನಮೂದಿಸಿಲ್ಲ ಎಂದರೆ ಸರಿ .

4. 1984 ಮತ್ತು 1987 ರ ಪಹಣಿ ಪತ್ರಿಕೆ ನೊದಿಡಿದ್ದೀರಾ ಎಂದರೆ ಮೂಲ ವಾದಿ ನೋಡಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ . 1984 ಮತ್ತು 1987 ರ ಪಹಣಿ ಪತ್ರಿಕೆ ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರಿದು ವಕೀಲರ ಬಳಿ ನೀಡಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ . 1984 ಮತ್ತು 87 ರಲ್ಲಿ ಸರ್ವೆ ನಂ 88 ರ ಪೂರ್ತಿ ಕ್ಷೇತ್ರ 3 ಎಕರೆ 13 ಗುಂಟೆ ಇತ್ತು ಎಂದರೆ ಸರಿ . ಪಹಣಿ ಪತ್ರಿಕೆಯ ಪ್ರಕಾರ ಸರ್ವೆ ನಂ 88 ರಲ್ಲಿ ತಾಮಸೆ ಗುರುನಾಥ ರಾಮ ಅವರ 25 ಗುಂಟೆ ಆಸ್ತಿ ಇತ್ತು ಎಂದರೆ ಸರಿ . ಅದರಂತೆ ಪಹಣಿ ಪತ್ರಿಕೆಯ ಪ್ರಕಾರ ಗಣಪತಿ ಪಾಂಡುರಂಗ ನಾಯ್ಕ ಅವರ 33 ಗುಂಟೆ ಮತ್ತು ಮಹಾದೇವ ಗೋವಿಂದ ನಾಯ್ಕ ಅವರ 35 ಗುಂಟೆ ಆಸ್ತಿ ಇತ್ತು ಎಂದರೆ ಸರಿ . 1984 ವುತ್ತು 1987 ರಲ್ಲಿ ಸದ್ರಿ ಆಸ್ತಿ ಸಾಮಾಯಿಕ ಆಸ್ತಿಯಾಗಿತ್ತು ಎಂದರೆ ಸರಿ . ಸಾಕ್ಷಿಯು ಮುಂದುವರಿದು ನಂತರ ವಿಭಜನೆ ಆಯಿತು ಎಂದು ನುಡಿಯುತ್ತಾರೆ .

5. ದಾವೆ ಸಲ್ಲಿಸುವ ಪೂರ್ವದಲ್ಲಿ ಬೇಳೂರಕರ್ ಕುಟಂಬದಲ್ಲಿ ವಾಟ್ನಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ . ವಾಟ್ನಿ ಯಾದಾವಾಗ ಸರ್ವೆ ನಂ 88 ರಲ್ಲಿ ಒಟ್ಟು 16 ಹಿಸ್ಸೆಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿಯೇ 16 ಹಿಸ್ಸೆಗಳು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ . ನನ್ನ ಪ್ರಕಾರ ನನ್ನ ಮನೆ 16 ಹಿಸ್ಸೆಗಳಲ್ಲಿ ಯಾವ ಹಿಸ್ಸೆಯಲ್ಲಿದೆ ಎಂದರೆ ನನಗೆ ಹೇಳಲು ಬರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ಸರ್ವೆ ನಂ 88 ರಲ್ಲಿ ವಾಟ್ನಿಯ ನಂತರ ಸುಬ್ರಾಯ ರಾಮಾ ಬೇಳೂರಕರ್ ವರಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ . ಎಷ್ಟು ಕ್ಷೇತ್ರದಲ್ಲಿ ಹಕ್ಕಿದೆ ಎಂದರೆ 20 ಗುಂಟೆ ಕ್ಷೇತ್ರ ನಮಗೆ ನೀಡಿದ್ದು , ಅದು ಅವರ ಪಾಲಿಗೆ ನೀಡಲಾಗಿದೆ ಎಂದು ನುಡಿಯುತ್ತಾರೆ .

6. ನನ್ನ ಪ್ರಕಾರ ಸುಬ್ರಾಯ ರಾಮಾ ಬೇಳೂರಕ್ ಅವರಿಗೆ ಹಣ ನೀಡಿದ ಬಗ್ಗೆ ಯವುದಾದರೂ ಬ್ಯಾಂಕ್ ದಾಖಲಾತಿಗಳು ಇವೆಯಾ ಎಂದರೆ ನಗದು ನೀಡಿದ್ದೇವೆ ಎಂದು ಸಾಕ್ಷಿಯು

ನುಡಿಯುತ್ತಾರೆ . ನಗದನ್ನು ಎಲ್ಲಿಂದ ಹೊಂದಿಸಿದರು ಎಂದು ತೋರಿಸಲು ದಾಖಲಾತಿಗಳು ಇವೆಯಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ಮೂಲ ವಾದಿ ಸುಬ್ರಾಯ ರಾಮಾ ಬೇಳೂರಕರ್ ಅವರಿಗೆ ಯಾವುದೆ ಹಣ ನೀಡಿಲ್ಲ , ಮತ್ತು ಯಾವುದೇ ದಾಖಲಾತಿಯನ್ನು ಸುಬ್ರಾಯ ರಾಮಾ ಬೇಳೂರಕರ ಅವರು ಮೂಲ ವಾದಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ .

7. ಸುಬ್ರಾಯ ರಾಮ ಬೇಳೂರಕರ್ ಅವರ ಜೀವಿತಾವಧಿಯಲ್ಲಿ ಅವರ ಮತ್ತು 1 ಮತ್ತು 2 ನೇ ಪ್ರತಿವಾದಿಯವರ ನಡುವೆ ಬಹಳ ವ್ಯಾಜ್ಯಗಳು ದ್ದವು ಎಂದರೆ ಸರಿ . 2 ನೇ ವಾದಿಯು ಸುಬ್ರಾಯ ರಾಮ ಬೇಳೂರಕರ್ ಅವರಿಗೆ ಯಾವುದೇ ವಟಮುಕ್ತಾರನಾಮೆಯನ್ನು ಜಮೀನು ಮಾರಾಟ ಮಾಡಲು ನೀಡಿಲ್ಲ ಮತ್ತು ಸುಬ್ರಾಯ ರಾಮ ಬೇಳೂರಕರ್ ಅವರು ಯಾವುದೇಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ . ನಿಪಿ–8 ಮತ್ತು 9 ನೊಂದಾಯಿತ ದಾಖಲಾತಿಗಳಲ್ಲ. ನಿಪಿ–8 ಮತ್ತು 9 ಕಾನೂನಿನ ಪ್ರಕಾರ ಸೂಕ್ತ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ .

8. ಸರ್ವೆ ನಂ 88 ಇದು ಬೇಳೂರಕರ್ ಕುಟಂಬಕ್ಕೆ land tribunal ನಿಂದ ಬಂದ ಆಸ್ತಿ ಎಂದರೆ ಸರಿ . 1984 ಮತ್ತು 1987 ರಲ್ಲಿ ಸದ್ರಿ ಆಸ್ತಿ ಪರಭಾರೆ ಮಾಡಬಾರದು ಎಂಬ ಶರತ್ತು ಲಾಗು ಇತ್ತು ಎಂದರೆ ಸರಿ . ಸಾಕ್ಷಿಯು ಮುಂದುವರಿದು ಆದ ಕಾರಣವೇ ವಚನ ಪತ್ರ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ . ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ 14 ಗುಂಟೆ 6 ಆಣೆ ಕ್ಷೇತ್ರವನ್ನು ದಾವೆ ಸಲ್ಲಿಸುವ ಪೂರ್ವದಲ್ಲಿ ಬಿನ್ ಶೇತ್ಕಿ ಯಾಗಿ ಪರಿವರ್ತಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ನಾನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಬಳಿ ಇದ್ದ ಎಲ್ಲಾ ಕಾಗದ ಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ . ನಾನು ಹಾಜರು ಪಡಿಸಿದ ಯಾವುದೇ ದಾಖಲಾತಿಗಳು 2 ಪ್ರತಿವಾಗೆ ಬಂಧನಕಾರಕವಲ್ಲ ಮತ್ತು 2 ನೇ ಪ್ರತಿವಾದಿಯ ವಿರುದ್ದ ದಾವೆ ವಜಾಗೊಳ್ಳಲು ಯೋಗ್ಯ ಎಂದರೆ ಸರಿಯಲ್ಲ .3 ನೇ ಪರತಿವಾದಿ ಮತ್ತು 2 ನೇ ಪ್ರತಿವಾದಿಯ ನಡುವೆ ವೈಮನಸ್ಸು ಇದ್ದ ಕಾರಣ 3 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ 2 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)**

**ಓ. ಹೇ.ಕೇ. ಸರಿ ಇದೆ.**

ಪ್ರ.ಸಿವಿಲ್ ಜಡ್ಜ, ಕಾರವಾರ